ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/07/ಎಲ್‌ಆರ್‌ಡಿಸಿ/2019-20/1316

ನಿರ್ದೇಶಕರವರ ಕಛೇರಿ
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು-560 001
ದಿನಾಂಕ:06-07-2019

-:ಸುತ್ತೋಲೆ:-

ವಿಷಯ:- ಒಳಚರಂಡಿ ಮತ್ತು ರೊಚ್ಚುತೊಟ್ಟಿ ಸ್ವಚ್ಛಗೊಳಿಸುವ ಕುರಿತು ಅಂತಿಮ ವರ್ಷದ ಡಿಪ್ಲೋಮ ವಿದ್ಯಾರ್ಥಿಗಳಿಂದ ಯೋಜನಾ ಪ್ರಸ್ತಾವನೆ ಸಿದ್ಧಪಡಿಸುವ ಕುರಿತು.

ಉಲ್ಲೇಖ:- ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ಪತ್ರ ಸಂಖ್ಯೆ: ಎಂಪ್ರಿ/ಸಿ.ಆರ್-16/ತರಬೇತಿ/2019-20/320, ದಿ:26-06-2019.

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ(ಎಂಪ್ರಿ)ಯು ಸ್ವಾಯತ್ತ ಸಂಸ್ಥೆಯಾಗಿದ್ದು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಸಂಸ್ಥೆಯು ಪರಿಸರಕ್ಕೆ ಪೂರಕವಾದ ವಿಷಯಗಳ ಕುರಿತು ಸಂಶೋಧನೆ ಹಾಗೂ ಅಧ್ಯಯನ ಹಮ್ಮಿ ಕೊಳ್ಳುವುದರ ಜೊತೆಗೆ ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ವಿವಿಧ ತರಬೇತಿಗಳನ್ನು ಆಯೋಜಿಸುವುದರ ಮೂಲಕ ಪರಿಸರ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ಶ್ರಮಿಸುತ್ತಿದೆ. ಪ್ರಸಕ್ತ ವರ್ಷಗಳಲ್ಲಿ ಒಳಚರಂಡಿ ಮತ್ತು ರೊಚ್ಚುತೊಟ್ಟಿ ಸ್ವಚ್ಛಗೊಳಿಸುವ ಕಾರ್ಯಚರಣೆ ವೇಳೆಯಲ್ಲಿ ಹಲವು ಅವಘಡಗಳು ಸಂಭವಿಸುತ್ತಿರುವ ಕಾರಣ ಕಡಿಮೆ ವೆಚ್ಚದಲ್ಲಿ ಸರಳವಾಗಿ ಯಾಂತ್ರಿಕೃತ ವ್ಯವಸ್ಥೆಯಿಂದ ಹಲವಾರು ಜೀವಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಅಧ್ಯಯನ ಕೈಗೊಂಡು ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳ ಮೂಲಕ ಸರಳ ಯಂತ್ರ ವಿನ್ಯಾಸಗೊಳಿಸಲು ಆಸಕ್ತ ವಿದ್ಯಾರ್ಥಿಗಳಿಂದ ಯೋಜನಾ ಪ್ರಸ್ತಾವನೆಯನ್ನು ಸಿದ್ದಪಡಿಸಿ ಸದರಿ ಸಂಸ್ಥೆಗೆ ಸಲ್ಲಿಸಲು ಕೋರಿರುತ್ತಾರೆ.

ಈ ಸಂಬಂಧ, ಉತ್ತಮ ಯೋಜನಾ ಪ್ರಸ್ತಾವನೆಯನ್ನು ಸಿದ್ಧಪಡಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಗಳಿಗೆ ಸಂಸ್ಥೆಯ ವತಿಯಿಂದ ರೂ. 10,000/-ಗಳ ಸಹಾಯಧನವನ್ನು ಸರಳ ಯಂತ್ರ ವಿನ್ಯಾಸಗೊಳಿಸಲು ನೀಡಲಾಗುವುದೆಂದು ತಿಳಿಸಲಾಗಿದೆ. ಆದಕಾರಣ ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳು ಸಂಸ್ಥೆಯ ಅಂತಿಮ ವರ್ಷದ ಡಿಪ್ಲೋಮ ವಿದ್ಯಾರ್ಥಿಗಳು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಲು ಅನುಕೂಲವಾಗುವಂತೆ, ವಿದ್ಯಾರ್ಥಿಗಳ ಗಮನಕ್ಕೆ ತರುವ ಮೂಲಕ ಪ್ರೋತ್ಸಾಹಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು ಇವರನ್ನು ಸಂಪರ್ಕಿಸುವುದು. (ಉಲ್ಲೇಖಿತ ಪತ್ರ ಲಗತ್ತಿಸಿದೆ)

ಜಂಟಿ ನಿರ್ದೇಶಕರು(ಸಿಡಿಸಿ)

ಇವರಿಗೆ:-
1. ರಾಜ್ಯದ ಎಲ್ಲಾ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರುಗಳಿಗೆ-ಪರಿಚಲನೆಯ ಮೂಲಕ/ಸಂಸ್ಥೆಯ ಸೂಚನಾಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರಲು ಸೂಕ್ತ ಕ್ರಮಕ್ಕಾಗಿ.
2. ಮಹಾನಿರ್ದೇಶಕರು, ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, "ಹಸಿರು ಭವನ" ದೊರೆಸಾನಿಪಾಳ್ಯ ಅರಣ್ಯ ಆವರಣ, ವಿನಾಯಕನಗರ ವೃತ್ತ, ಜೆಪಿ ನಗರ, 5ನೇ ಹಂತ, ಬೆಂಗಳೂರು
3. ಇ-ಆಡಳಿತ ವಿಭಾಗ, ತಾಂ.ಶಿ.ನಿ, ಬೆಂಗಳೂರು ಇವರಿಗೆ ಡಿ.ಟಿ.ಇ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ**

**ENVIRONMENTAL MANAGEMENT & POLICY RESEARCH INSTITUTE**

ಪನಿನೀಸಂಸಂ

ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ

ISO 9001:2015 CERTIFICATION Intertek

UKAS MANAGEMENT SYSTEMS 014

OHSAS 18001 CERTIFICATION Intertek

(ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಕರ್ನಾಟಕ ಸರ್ಕಾರದ ಅಧೀನದಲ್ಲಿ, ಕರ್ನಾಟಕ ಸಂಘ ಸಂಸ್ಥೆ ಕಾಯಿದೆ, 1960 ರಡಿಯಲ್ಲಿ ನೊಂದಾಯಿಸಲಾದ ಸಂಸ್ಥೆ.)

ISO 9001 : 2015 ಮತ್ತು OHSAS 18001 : 2007 ದೃಢೀಕರಿಸಲಾಗಿದೆ

( A society established under Forest Environment and Ecology Department, Government of Karnataka and registered under Karnataka Registration of Societies Act, 1960)

ISO 9001:2015 and OHAS 18001 : 2007 Certified


ಎಂಪ್ರಿ/ಸಿ.ಆರ್–16/ತರಬೇತಿ/2019–20 1320 ದಿನಾಂಕ: 26–06–2019

1609 29/6/19

ಇವರಿಗೆ,

ನಿರ್ದೇಶಕರು
ತಾಂತ್ರಿಕ ಶಿಕ್ಷಣ ಇಲಾಖೆ
ಬೆಂಗಳೂರು

ಮಾನ್ಯರೇ,

**ವಿಷಯ:** ಒಳಚರಂಡಿ ಮತ್ತು ರೊಚ್ಚುತೊಟ್ಟಿ ಸ್ವಚ್ಛಗೊಳಿಸುವ ಕುರಿತು ಡಿಪ್ಲೋಮ ವಿದ್ಯಾರ್ಥಿಗಳಿಂದ ಯೋಜನಾ ಪ್ರಸ್ತಾವನೆ ಸಿದ್ಧಪಡಿಸುವ ಕುರಿತು.

*****************

**ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ**(ಎಂಪ್ರಿ)ಯು ಸ್ವಾಯತ್ತ ಸಂಸ್ಥೆಯಾಗಿದ್ದು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ. ಸಂಸ್ಥೆಯು ಪರಿಸರಕ್ಕೆ ಪೂರಕವಾದ ವಿಷಯಗಳ ಕುರಿತು ಸಂಶೋಧನೆ ಹಾಗೂ ಅಧ್ಯಯನ ಹಮ್ಮಿಕೊಳ್ಳುವುದರ ಜೊತೆಗೆ ಪರಿಸರ ಸಂಬಂಧಿ ವಿಷಯಗಳ ಬಗ್ಗೆ ವಿವಿಧ ತರಬೇತಿಗಳನ್ನು ಆಯೋಜಿಸುವುದರ ಮೂಲಕ ಪರಿಸರ ನಿರ್ವಹಣೆ ಹಾಗೂ ಸಂರಕ್ಷಣೆಗಾಗಿ ಶ್ರಮಿಸುತ್ತಿದೆ.

ಪ್ರಸಕ್ತ ವರ್ಷಗಳಲ್ಲಿ ಒಳಚರಂಡಿ ಮತ್ತು ರೊಚ್ಚು ತೊಟ್ಟಿ ಸ್ವಚ್ಛಗೊಳಿಸುವ ಕಾರ್ಯಾಚರಣೆ ವೇಳೆಯಲ್ಲಿ ಹಲವು ಅವಘಡಗಳು ಸಂಭವಿಸುತ್ತಿವೆ. ಈ ನಿಟ್ಟಿನಲ್ಲಿ ಕಡಿಮೆ ವೆಚ್ಚದಲ್ಲಿ ಸರಳವಾಗಿ ಯಾಂತ್ರಿಕೃತ ವ್ಯವಸ್ಥೆಯಿಂದ ಹಲವಾರು ಜೀವಗಳನ್ನು ರಕ್ಷಿಸಬಹುದಾಗಿರುತ್ತದ. ಈ ಬಗ್ಗೆ ಅಧ್ಯಯನ ಕೈಗೊಂಡು ಡಿಪ್ಲೋಮ ವಿದ್ಯಾಭ್ಯಾಸವನ್ನು ಮಾಡುವ ವಿದ್ಯಾರ್ಥಿಗಳ ಮೂಲಕ ಸರಳ ಯಂತ್ರ ವಿನ್ಯಾಸಗೊಳಿಸಲು ಆಸಕ್ತ ವಿದ್ಯಾರ್ಥಿಗಳಿಂದ ಯೋಜನಾ ಪ್ರಸ್ತಾವನೆಯನ್ನು ಸಿದ್ಧಪಡಿಸಿ ಸಂಸ್ಥೆಗೆ ಸಲ್ಲಿಸಲು ಕೋರಲಾಗಿದೆ. **ಉತ್ತಮ ಯೋಜನಾ ಪ್ರಸ್ತಾವನೆಯನ್ನು** ಸಿದ್ಧಪಡಿಸಿದ ವಿದ್ಯಾರ್ಥಿ/ವಿದ್ಯಾರ್ಥಿನಿಗಳಿಗೆ ಸಂಸ್ಥೆಯ ವತಿಯಿಂದ **ರೂ. 10,000/–ಗಳ** ಸಹಾಯಧನವನ್ನು **ಸರಳಯಂತ್ರ ವಿನ್ಯಾಸಗೊಳಿಸಲು** ನೀಡಲಾಗುವುದು.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ

ಮಹಾನಿರ್ದೇಶಕರು 26/6
ಪನಿನೀಸಂಸಂ

L.R.D.C
CDed
5/7/19


"ಹಸಿರು ಭವನ". ದೊರೆಸಾನಿಪಾಳ್ಯ ಅರಣ್ಯ ಆವರಣ, ವಿನಾಯಕನಗರ ವೃತ್ತ, ಜೆ.ಪಿ. ನಗರ, 5ನೇ ಹಂತ, ಬೆಂಗಳೂರು–560078
ದೂರವಾಣಿ ಸಂಖ್ಯೆ: 080–26490747/46, ಫ್ಯಾಕ್ಸ್: 080–26450745, ಇ–ಮೇಲ್: empriblr @gmail.com. ವೆಬ್‌ಸೈಟ್: http://empri/kar.nic.in
"HasiruBhavana", Doresanipalya Forest Campus, Vinayakanagar Circle, J.P.Nagar 5th Phase, Bengaluru – 560078
Telephone No.080-2649 0747/46, FAX 080-26490745, e-mail: empriblr @gmail.com Website:http://empri/kar.nic.in